ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ ,ನೃಪತುಂಗ ರಸ್ತೆ, ಬೆಂಗಳೂರು-01**

ಸಂಖ್ಯೆ : ಸಿ5(5) ದ್ವಿ.ದ.ಸ. ಬಡ್ತಿ-49/2019-20 ದಿನಾಂಕ : 13-01-2021

ಜ್ಞಾಪನ

ವಿಷಯ : ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತಾಲಯ ಘಟಕ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 'ಡಿ' ಗುಂಪಿನ ನೌಕರರಿಗೆ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ಮುಂಬಡ್ತಿ ನೀಡುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಸಿ5(5) ಡಿ ಗ್ರೂಪ್ ಜೇ.ಪ 54/2019-20 ದಿನಾಂಕ: 29-06-2020

* * * * * * *

ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತರ ಘಟಕದಡಿಯ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರೂಪ್ 'ಡಿ' ನೌಕರರಿಗೆ ಅವರುಗಳ ಸೇವಾ ಜೇಷ್ಟತೆಗೆ ಅನುಗುಣವಾಗಿ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ಮುಂಬಡ್ತಿಯನ್ನು ನೀಡಲು ಉದ್ದೇಶಿಸಲಾಗಿದೆ.

ತಮ್ಮ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ 'ಡಿ' ಗುಂಪಿನ ನೌಕರರುಗಳಲ್ಲಿ ಆಯುಕ್ತರ ಘಟಕದಡಿಯ ಕಛೇರಿಗಳಲ್ಲಿ 07 ವರ್ಷಗಳ ಸೇವೆಯನ್ನು ಪೂರೈಸಿದ್ದು, ಎಸ್.ಎಸ್.ಎಲ್.ಸಿ. ವಿದ್ಯಾರ್ಹತೆಯನ್ನು ಹೊಂದಿರುವಂತಹ ನೌಕರರುಗಳ ಈ ಕೆಳಕಂಡ ದಾಖಲೆಗಳನ್ನು ಒಳಗೊಂಡಿರುವ ನೌಕರರವಾರು ಡೋಸಿಯರ್‌ಗಳನ್ನು ಸಲ್ಲಿಸಲು ಸೂಚಿಸಿದೆ.

1. 2015-16 ರಿಂದ 2019-20 ನೇ ಸಾಲಿನವರೆಗಿನ ನೌಕರರ ಕಾರ್ಯ ಕ್ಷಮತೆಯ ಬಗ್ಗೆ ವರದಿ.
2. ಎಸ್.ಎಸ್.ಎಲ್.ಸಿ. ಯಲ್ಲಿ ತೇರ್ಗಡೆ ಹೊಂದಿರುವ ಅಂಕ ಪಟ್ಟಿಯ ದೃಢೀಕೃತ ಪ್ರತಿ
3. ಕನ್ನಡ ಭಾಷಾ ವಿನಾಯ್ತಿ ಪ್ರಮಾಣ ಪತ್ರ ಪೂರಕ ದಾಖಲೆಯ ದೃಢೀಕೃತ ಪ್ರತಿಯೊಂದಿಗೆ.
4. ಸಂಬಂಧಿಸಿದ ನೌಕರರ ವಿರುದ್ಧ ಯಾವುದೇ ಇಲಾಖಾ ವಿಚಾರಣೆಯಾಗಲೀ / ನ್ಯಾಯಾಂಗ ಪ್ರಕರಣವಾಗಲೀ ಬಾಕಿ ಇಲ್ಲದೇ ಇರುವ ದೃಢೀಕರಣ ಪತ್ರ.
5. ನೌಕರರು ಪ.ಜಾತಿ / ಪ. ಪಂಗಡಕ್ಕೆ ಸೇರಿದವರಾಗಿದ್ದಲ್ಲಿ ಜಾತಿ ಪ್ರಮಾಣ ಪತ್ರದ ಪ್ರತಿ.
6. ಈ ಪತ್ರದೊಂದಿಗೆ ನೀಡಲಾಗಿರುವ ನಮೂನೆಯಲ್ಲಿ ನೌಕರರ ಸೇವಾ ವಿವರ.

ಪ್ರತಿ ಸಿಬ್ಬಂದಿವಾರು ಮಾಹಿತಿ / ದಾಖಲೆಗಳನ್ನು ಒಳಗೊಂಡಿರುವ ಡೋಸಿಯರನ್ನು ದಿನಾಂಕ : 20-01-2021 ರೊಳಗಾಗಿ ಈ ಕಛೇರಿಗೆ ಸಂಬಂಧಿಸಿದ ವಿಷಯ ನಿರ್ವಾಹಕರ ಮುಖೇನ ಮುದ್ದಾಂ ಸಹಾಯಕ ನಿರ್ದೇಶಕರು(ಆಡಳಿತ) ರವರಿಗೆ ಕಡ್ಡಾಯವಾಗಿ ಸಲ್ಲಿಸಲು ತಿಳಿಸಿದೆ.

ಅಲ್ಲದೆ, ಈ ಪತ್ರದೊಂದಿಗೆ ಲಗತ್ತಿಸಿರುವ ಪಟ್ಟಿಯನ್ನು ಹೊರತುಪಡಿಸಿ ಇತರ ಅರ್ಹ ಗ್ರೂಪ್ ಡಿ ನೌಕರರು ಇದ್ದಂತಹ ಪಕ್ಷದಲ್ಲಿ ಅಂತಹವರ ಮಾಹಿತಿಯನ್ನು ಸಹ ಸಲ್ಲಿಸುವುದು.

ಷರಾ: ಮೇಲೆ ತಿಳಿಸಿದಂತೆ ಮುಂಬಡ್ತಿ ಕುರಿತಂತೆ ಕೋರಿರುವ ಮಾಹಿತಿ/ದಾಖಲೆಗಳು ಮತ್ತು ವ್ಯತಿರಿಕ್ತ ಷರಾಗಳನ್ನು ನಿಗಧಿತ ದಿನಾಂಕ ಸಮಯದೊಳಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಒಂದು ವೇಳೆ ಪ್ರಸ್ತಾವನೆಯನ್ನು ಸಲ್ಲಿಸದಿದ್ದಲ್ಲಿ ಪಟ್ಟಿಯಲ್ಲಿರುವ ನೌಕರರುಗಳ ಮೇಲೆ ಯಾವುದೇ ವ್ಯತಿರಿಕ್ತ ಷರಾ ಇರುವುದಿಲ್ಲವೆಂದು ಭಾವಿಸಿ ಮುಂಬಡ್ತಿಗೆ ಕ್ರಮವಹಿಸಲಾಗುವುದು ನಂತರ ಬಡ್ತಿಯಿಂದ ಉಂಟಾಗುವ ವ್ಯತಿರಿಕ್ತ ಪರಿಣಾಮಗಳಿಗೆ ಸಂಬಂಧಪಟ್ಟಂತಹ ನೌಕರರು ಹಾಗೂ ಅಧಿಕಾರಿಗಳನ್ನು ಜವಾಬ್ದಾರರನ್ನಾಗಿಸಿ ಸೂಕ್ತ ಶಿಸ್ತುಕ್ರಮವಹಿಸಲಾಗುವುದು ಎಂದು ತಿಳಿಸಿದೆ.

(ಮಾನ್ಯ ಆಯುಕ್ತರ ಆದೇಶದ ಮೇರೆಗೆ)

[ಸಿರಿಯಣ್ಣವರ ಲಲಿತಾ ಚಂದ್ರಶೇಖರ್]
ನಿರ್ದೇಶಕರು [ಆಡಳಿತ][ಹೆ.ಪ್ರ]

13/1

ಇವರಿಗೆ ಮುಂದಿನ ಕ್ರಮಕ್ಕಾಗಿ:

1. ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳುರು.
2. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ಕಛೇರಿ, ಬನಶಂಖರಿ, ಬೆಂಗಳೂರು.
3. ಪ್ರಾಂಶುಪಾಲರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಬೆಂಗಳೂರು ನಗರ, ರಾಜರಾಜೇಶ್ವರಿನಗರ, ಬೆಂಗಳೂರು.
4. ಪ್ರಾಂಶುಪಾಲರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಬೆಂಗಳೂರು ಗ್ರಾಮಾಂತರ, ರಾಜಾಜಿನಗರ, ಬೆಂಗಳೂರು.
5. ಉಪ ನಿರ್ದೇಶಕರು, ಶಿಕ್ಷಕರ ಕಲ್ಯಾಣ ನಿಧಿ, ಕೆ.ಜಿ. ರಸ್ತೆ, ಬೆಂಗಳೂರು.
6. ಕಛೇರಿ ಪ್ರತಿ.

ಅನುಬಂಧ

ಗ್ರೂಪ್ ಡಿ ನೌಕರರ ಪಟ್ಟಿ

| ಕ್ರ.ಸಂ | ಜೇಷ್ಠತಾ ಸಂಖ್ಯೆ | ನೌಕರರ ಹೆಸರುಶ್ರೀಮತಿ/ ಶ್ರೀ | ಕಾರ್ಯನಿರ್ವಹಿಸುತ್ತಿರುವ ಕಛೇರಿ ವಿಳಾಸ | ವರ್ಗ |
|---|---|---|---|---|
| 01 | 198 | ಅನ್ವರ ಅಹಮದ್ ಖಾನ್ | ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,ಮಲ್ಲೇಶ್ವರಂ, ಬೆಂಗಳೂರು | ಇತರೆ |
| 02 | 222 | ತೇಜೇಶ್ | ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | ಎಸ್.ಸಿ |
| 03 | 255 | ಕೆ.ಯಶೋಧಮ್ಮ | ಡಿ.ಎಸ್.ಇ.ಆರ್.ಟಿ ಕಛೇರಿ. ಬೆಂಗಳೂರು | ಇತರೆ |
| 04 | 257 | ಆರ್. ವಿಲಿಯಂ | ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | ಇತರೆ |
| 05 | 261 | ಟಿ ಚಿಕ್ಕಮ್ಮ | ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು | ಇತರೆ |
| 06 | 269 | ಜಿ.ಗೋವಿಂದಸ್ವಾಮಿ | ಡಿ.ಎಸ್.ಇ.ಆರ್.ಟಿ ಕಛೇರಿ. ಬೆಂಗಳೂರು | ಇತರೆ |
| 07 | 271 | ಹೆಚ್.ಬಿ ಭಾರತಿ | ಡಯಟ್, ಬೆಂಗಳೂರು ನಗರ ಜಿಲ್ಲೆ. ಬೆಂಗಳೂರು | ಇತರೆ |
| 08 | 276 | ಲಕ್ಷ್ಮೀಪತಿ | ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು | ಎಸ್.ಸಿ |
| 09 | 278 | ಬಿ.ಪಿ.ಪೂರ್ಣಿಮ | ಡಿ.ಎಸ್.ಇ.ಆರ್.ಟಿ ಕಛೇರಿ. ಬೆಂಗಳೂರು | ಇತರೆ |
| 10 | 279 | ಷಫಿಖಾನ್ | ಡಯಟ್, ಬೆಂಗಳೂರು ನಗರ ಜಿಲ್ಲೆ. ಬೆಂಗಳೂರು | ಇತರೆ |
| 11 | 282 | **ಶಾಂತಾಮಣಿ** | ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,ಮಲ್ಲೇಶ್ವರಂ, ಬೆಂಗಳೂರು | ಇತರೆ |
| 12 | 285 | ವಿ. ವರಲಕ್ಷ್ಮಿ | ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,ಮಲ್ಲೇಶ್ವರಂ, ಬೆಂಗಳೂರು | ಇತರೆ |
| 13 | **286** | ಬಿ.ಆರ್. ಸತ್ಯನಾರಾಯಣ | ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | ಇತರೆ |
| 14 | **289** | ಜೆ.ಮೇರಿ ಎಲಿಜಬೆತ್ | ಡಯಟ್ ಬೆಂಗಳೂರು ನಗರ ಜಿಲ್ಲೆ | ಇತರೆ |

[ಸಿರಿಯಣ್ಣವರ ಲಲಿತಾ ಚಂದ್ರಶೇಖರ್]
ನಿರ್ದೇಶಕರು [ಆಡಳಿತ][ಹೆ.ಪ್ರ]

13/1

## ನಮೂನೆ

**ದ್ವಿತೀಯ ದರ್ಜೆ ಸಹಾಯಕರ ವೃಂದಕ್ಕೆ ಸ್ಥಾನಪನ್ನ ಬಡ್ತಿಯನ್ನು ನೀಡಲು ಅಗತ್ಯವಿರುವ ಮಾಹಿತಿ**

| ಕ್ರ.ಸಂ. | ಅಧಿಕಾರಿಗಳ ಸೇವಾ ವಿವರ | ಮಾಹಿತಿ |
|---|---|---|
| 1 | ಗ್ರೂಪ್ 'ಡಿ' ನೌಕರರ ಹುದ್ದೆಯ ಜೇಷ್ಟತಾ ಕ್ರಮಾಂಕ | |
| 2 | ಸಿಬ್ಬಂದಿಯ ಹೆಸರು | |
| 3 | ಪದನಾಮ | |
| 4 | ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಕಛೇರಿಯ ಪೂರ್ಣ ವಿಳಾಸ | |
| 5 | ಜನ್ಮ ದಿನಾಂಕ | |
| 6 | ಗ್ರೂಪ್ 'ಡಿ' ಹುದ್ದೆಯಲ್ಲಿ ನೇಮಕಾತಿ ಸಕ್ರಮಗೊಂಡ ದಿನಾಂಕ | |
| 7 | ಆಯುಕ್ತರ ಘಟಕ ಕಛೇರಿಯಲ್ಲಿ ಯಾವ ದಿನಾಂಕದಿಂದ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. | |
| 7 | ಗುಂಪು (ಪ.ಜಾತಿ, ಪ.ವರ್ಗ/ ಸಾಮಾನ್ಯ) | |
| 8 | 1) ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ ವಿವರ<br>2) ಕನ್ನಡ ಭಾಷಾ ಪರೀಕ್ಷೆ | **ನೋಂದಣಿ ಸಂಖ್ಯೆ ವರ್ಷ** |
| 9 | 2015-2019-20 ರವರೆವಿಗೆ ಕಾರ್ಯ ಕ್ಷಮತೆಯ ಬಗ್ಗೆ ವರದಿ | |
| 10 | ಇಲಾಖಾ ವಿಚಾರಣೆ / ದೂರು/ ನ್ಯಾಯಾಲಯದ ಪ್ರಕರಣಗಳು ಇದ್ದಲ್ಲಿ ವಿವರ | |
| 11 | ಷರಾ / ಶಿಫಾರಸ್ಸು | |

ಮೇಲ್ಕಂಡ ಎಲ್ಲಾ ಅಂಶಗಳು ಸಂಬಂಧಿತ ಸಿಬ್ಬಂದಿಗಳ ಸೇವಾ ವಿವರ / ವಹಿಯನ್ನು ಪರಿಶೀಲಿಸಿ, ಮಾಹಿತಿಯನ್ನು ನೀಡಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ :

ಸ್ಥಳ :

ಕಛೇರಿ ಮುಖ್ಯಸ್ಥರ ಸಹಿ

ಮೊಹರಿನೊಂದಿಗೆ